# ಭಾರತೀಯ ಸಂಗೀತಕ್ಕೆ ಪಂಢರೀಕ ವಿಠಲನ ಕೊಡುಗೆ

ನಾಗರಾಜ ಎಮ್. ಪುರಮಕರ

ಪಿಎಚ್.ಡಿ ಸಂಶೋಧಕರು, ಸಂಗೀತ ವಿಭಾಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

Received: 13-06-2023 ; Accepted: 01-08-2023 ; Published: 09-05-2024

DOI: https://doi.org/10.5281/zenodo.11162307

## ABSTRACT:

ಪುಂಢರೀಕ ವಿಠಲ 19ನೇ ಶತಮಾನದಲ್ಲಿ ಜೀವಿಸಿದ ಒಬ್ಬ ಮಹಾನ್ ಸಂಗೀತಜ್ಞ, ಅವನು ಕನ್ನಡಿಗ. ಬೆಂಗಳೂರು ಜಿಲ್ಲೆಯ ಮಾಗಡಿ ತಾಲೂಕಿನ ಸಾತನೂರಿನವನು. ಕರ್ನಾಟಕದಲ್ಲಿ ಹುಟ್ಟಿ ಉತ್ತರ ಭಾರತದಲ್ಲಿ ಹೆಸರು ಪಡೆದವನು. ಕರ್ನಾಟಕೀ ಸಂಗೀತ, ಹಿಂದುಸ್ತಾನಿ ಸಂಗೀತ ಹಾಗೂ ನರ್ತನ ಈ ಮೂರರಲ್ಲೂ ಅಪ್ರತಿಮ ಪಾಂಡಿತ್ಯ ಮೆರೆದವನು. ಈ ಮೂರು ಕಲೆಗಳ ಆಧುನಿಕ ರೂಪಗಳಿಗೆ ನಾಂದೀವಾಚನವನ್ನು ಮಾಡಿದ ಆದ್ಯಾಚಾರ್ಯ; ಪುರಂದರದಾಸರನ್ನು 'ಕರ್ನಾಟಕೀ ಸಂಗೀತದ ಪಿತಾಮಹ' ಎನ್ನುವುದಾದರೆ, ಪುಂಢರೀಕ ವಿಠಲನನ್ನು 'ಸಂಗೀತ ನೃತ್ಯ ಲಕ್ಷಣಗಳ ಪಿತಾಮಹ' ಎನ್ನಲಡ್ಡಿಯಿಲ್ಲವೆಂಬುದು ಸಂಗೀತ ವಿದ್ವಾಂಸರ ಅಭಿಪ್ರಾಯ. ಭಾರತೀಯ ಸಂಗೀತಕ್ಕೆ ಪುಂಢರೀಕ ವಿಠಲನ ಕೊಡುಗೆ ಅಪಾರ ಮತ್ತು ಅಪತ್ರಿಮ. ಅವನು ರಚಿಸಿದನೆನ್ನುವ ಆರು ಗ್ರಂಥ ಗಳ ಪೈಕಿ ಈಗ ದೊರೆತಿರುವ ಗ್ರಂಥಗಳು ಕೇವಲ ನಾಲ್ಕು. ಉಳಿದೆರಡು ಅಲಭ್ಯ. ಅವನು ಸಂಗೀತ ಮತ್ತು ನೃತ್ಯ ಕುರಿತು ರಚಿಸಿದ ನಾಲ್ಕು ಗ್ರಂಥ ಗಳು ಸಂಗೀತದ ಶಾಸ್ತ್ರ ಮತ್ತು ಪ್ರಾಯೋಗಿಕ ಎರಡು ಕ್ಷೇತ್ರಗಳನ್ನು ಆಳಬಲ್ಲ ಆಧಾರ ಗ್ರಂಥಗಳು. ಅವುಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ. ಚಿಕ್ಕಂದಿನಿಂದಲೇ ಸಂಗೀತದಲ್ಲಿ ಒಲವಿರಿಸಿಕೊಂಡಿದ್ದ ಪುಂಢರೀಕವಿಠಲ ಕರ್ನಾಟಕೀ ಸಂಗೀತದ ಹಿರಿಮೆಯನ್ನು ಪ್ರಚಾರ ಮಾಡಲು, ಉತ್ತರ ಭಾರತದ ಕಡೆ 'ಸಂಗೀತ ಯಾತ್ರೆ' ಬೆಳಿಸಿದನು. ಅವನು ಮೊದಲು ಭೇಟಿಕೊಟ್ಟದ್ದು ಬುರ್ಹಾನಪುರಕ್ಕೆ. ಅಕಬರನ ಸಾಮಂತ ಮಾಧವ ಸಿಂಹ ಅಲ್ಲಿಯ ಅರಸನಾಗಿದ್ದ. ಆತ ಕಲಾಪ್ರೇಮಿ ಮತ್ತು ಗುಣ ಗ್ರಹಿಯಾಗಿದ್ದ. ಅವನು ಪುಂಢರೀಕ ವಿಠಲನ ಪಾಂಡಿತ್ಯವನ್ನು ಗಮನಿಸಿ ಅವನಿಗೆ ರಾಜಾಶ್ರಯ ನೀಡಿದ.

## KEYWORDS:

ಭಾರತೀಯ ಸಂಗೀತ, ಸಂಗೀತ ಗ್ರಂಥ, ಸಂಗೀತ ಗ್ರಂಥಕಾರರ ಕೊಡುಗೆ.

ಪಂಢರೀಕ ವಿಠಲ 19ನೇ ಶತಮಾನದಲ್ಲಿ ಜೀವಿಸಿದ ಒಬ್ಬ ಮಹಾನ್ ಸಂಗೀತಜ್ಞ, ಅವನು ಕನ್ನಡಿಗ. ಬೆಂಗಳೂರು ಜಿಲ್ಲೆಯ ಮಾಗಡಿ ತಾಲೂಕಿನ ಸಾತನೂರಿನವನು. ಕರ್ನಾಟಕದಲ್ಲಿ ಹುಟ್ಟಿ ಉತ್ತರ ಭಾರತದಲ್ಲಿ ಹೆಸರು ಪಡೆದವನು. ಕರ್ನಾಟಕೀ ಸಂಗೀತ, ಹಿಂದುಸ್ತಾನಿ ಸಂಗೀತ ಹಾಗೂ ನರ್ತನ ಈ ಮೂರರಲ್ಲೂ ಅಪ್ರತಿಮ ಪಾಂಡಿತ್ಯ ಮೆರೆದವನು. ಈ ಮೂರು ಕಲೆಗಳ ಆಧುನಿಕ ರೂಪಗಳಿಗೆ ನಾಂದೀವಾಚನವನ್ನು ಮಾಡಿದ ಆದ್ಯಾಚಾರ್ಯ; ದಾಸ ಶ್ರೇಷ್ಠ ಪುರಂದರದಾಸರನ್ನು 'ಕರ್ನಾಟಕೀ ಸಂಗೀತದ ಪಿತಾಮಹ' ಎನ್ನುವುದಾದರೆ, ಪಂಢರೀಕ ವಿಠಲನನ್ನು 'ಸಂಗೀತ ನೃತ್ಯ ಲಕ್ಷಣಗಳ ಪಿತಾಮಹ' ಎನ್ನಲಡ್ಡಿಯಿಲ್ಲವೆಂಬುದು ಸಂಗೀತ ವಿದ್ವಾಂಸರ ಅಭಿಪ್ರಾಯ.[1]

ಭಾರತೀಯ ಸಂಗೀತಕ್ಕೆ ಪಂಢರೀಕ ವಿಠಲನ ಕೊಡುಗೆ ಅಪಾರ ಮತ್ತು ಅಪ್ರತಿಮ. ಅವನು ರಚಿಸಿದನೆನ್ನುವ ಆರು ಗ್ರಂಥಗಳ ಪೈಕಿ ಈಗ ದೊರೆತಿರುವ ಗ್ರಂಥಗಳು ಕೇವಲ ನಾಲ್ಕು. ಉಳಿದೆರಡು ಅಲಭ್ಯ. ಅವನು ಸಂಗೀತ ಮತ್ತು ನೃತ್ಯ ಕುರಿತು ರಚಿಸಿದ ನಾಲ್ಕು ಗ್ರಂಥಗಳು ಸಂಗೀತದ ಶಾಸ್ತ್ರ ಮತ್ತು ಪ್ರಾಯೋಗಿಕ ಎರಡು ಕ್ಷೇತ್ರಗಳನ್ನು ಆಳಬಲ್ಲ ಆಧಾರಗ್ರಂಥಗಳು. ಅವುಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ.

ಚಿಕ್ಕಂದಿನಿಂದಲೇ ಸಂಗೀತದಲ್ಲಿ ಒಲವಿರಿಸಿಕೊಂಡಿದ್ದ ಪಂಢರೀಕವಿಠಲ ಕರ್ನಾಟಕೀ ಸಂಗೀತದ ಹಿರಿಮೆಯನ್ನು ಪ್ರಚಾರಮಾಡಲು, ಉತ್ತರ ಭಾರತದ ಕಡೆ 'ಸಂಗೀತ ಯಾತ್ರೆ' ಬೆಳಿಸಿದನು. ಅವನು ಮೊದಲು ಭೇಟಿಕೊಟ್ಟದ್ದು ಬುರ್ಹಾನಪುರಕ್ಕೆ. ಅಕಬರನ ಸಾಮಂತ ಮಾಧವ ಸಿಂಹ ಅಲ್ಲಿಯ ಅರಸನಾಗಿದ್ದ. ಆತ ಕಲಾಪ್ರೇಮಿ ಮತ್ತು ಗುಣಗ್ರಹಿಯಾಗಿದ್ದ. ಅವನು ಪಂಢರೀಕ ವಿಠಲನ ಪಾಂಡಿತ್ಯವನ್ನು ಗಮನಿಸಿ ಅವನಿಗೆ ರಾಜಾಶ್ರಯನೀಡಿದ. ಸಂಗೀತ ಕ್ಷೇತ್ರಕ್ಕೆ ಉಪಯೋಗವಾಗುವಂತಹ ಗ್ರಂಥ ರಚಿಸಿಕೊಡಬೇಕೆಂದು ವಿನಂತಿಸಿದ. ರಾಜನ ವಿನಂತಿಯನ್ನು ಮನ್ನಿಸಿ ಪುಂಢರೀಕ ವಿಠಲ 'ಷಡ್ರಾಗ ಚಂದ್ರೋದಯ' ಮತ್ತು 'ರಾಗಮಂಜರಿ' ಎಂಬ ಎರಡು ಗ್ರಂಥ ರಚಿಸಿದ. ಮೊದಲ ಗ್ರಂಥ ಕರ್ನಾಟಕೀ ಸಂಗೀತಕ್ಕೂ ಹಾಗೂ ಎರಡನೇಯ ಗ್ರಂಥ ಹಿಂದುಸ್ತಾನಿ ಸಂಗೀತಕ್ಕೆ ಸಂಬಂಧಿಸಿದೆ. ಸಂಗೀತದ ಶಾಸ್ತ್ರ ಮತ್ತು ಅದರ ಪ್ರಾಯೋಗಿಕ ಅಂಶಗಳು ಸಂಗೀತದಲ್ಲಿ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಈ ಗ್ರಂಥಗಳು ಮೈಲುಗಲ್ಲಾಗಿವೆ.[2]

ಹಿಂದುಸ್ತಾನಿ ಸಂಗೀತ ಅತ್ಯಂತ ಉಚ್ಚ್ರಯ ಸ್ಥಿತಿಯಲ್ಲಿದ್ದ ಕಾಲವದು. ಅಕ್ಬರ ದೆಹಲಿಸಿಂಹಾಸನವನ್ನೇರಿದ್ದ ಅವನ ಆಸ್ಥಾನದಲ್ಲಿ ಸಂಗೀತ ಸಾಮ್ರಾಟ

ತಾನಸೇನರಂತಹ ನವರತ್ನಗಳಿರುವುದನ್ನು, ಅಕ್ಬರ ಬಾದಶಾಹ ಸಂಗೀತ ಕಲೆಗೆ ನೀಡಿದ ಉನ್ನತ ಸ್ಥಾನವನ್ನು ಕೇಳಿತಿಳಿದ ಪಂಢರೀಕ ವಿಠಲ ದೆಹಲಿಗೆ ಬಂದ. ಅಕ್ಬರ ದರ್ಬಾರಿನ ಸಂಗೀತ ವೈಭವ ಕಂಡು ಮೂಕವಿಸ್ಮಿತನಾದ. ಪುಂಢರೀಕ ವಿಠಲನ ಸಂಗೀತ ಪಾಂಡಿತ್ಯದ ಬಗ್ಗೆ ರಾಜಾ ಮಾನಸಿಂಹನಿಂದ ಕೇಳಿ ತಿಳಿದಿದ್ದ ಅಕ್ಬರ ಪುಂಢರೀಕ ವಿಠಲನಿಗೆ ಆಸ್ಥಾನಕ್ಕೆ ಕಳಿಸಿ ರಾಜಾಶ್ರಯ ನೀಡಿದ. ಅಕ್ಬರನ ಆಸ್ಥಾನಕ್ಕೆ ಬಂದಮೇಲೆ ಪಂಢರೀಕ ವಿಠಲ ಅಕ್ಬರನ ಬಾದಶಹನ ವಿನಂತಿಯ ಮೇರೆಗೆ 'ರಾಗಮಾಲಾ' ಮತ್ತು 'ನರ್ತನ ನಿರ್ಣಯ' ಎಂಬ ಎರಡು ಗ್ರಂಥಗಳನ್ನು ರಚಿಸಿದ. ಪುಂಢರೀಕ ವಿಠಲನ ಮೇಲೆ ಉಲ್ಲೇಖಿಸಿದ ನಾಲ್ಕು ಗ್ರಂಥಗಳನ್ನು ಹೊರತು ಪಡಿಸಿ 'ದೂತೀ ಕರ್ಮಪ್ರಕಾಶ' ಮತ್ತು ಶೀಘ್ರಬೊಧಿನೀನಾಮಮಾಲಾ' ಎಂಬ ಇನ್ನೆರಡು ಗ್ರಂಥಗಳನ್ನು ರಚಿಸಿದನೆಂದು ತಿಳಿದು ಬರುತ್ತದೆ. ಆದರೆ ಇವೆರಡು ಗ್ರಂಥಗಳು ಉಪಲಬ್ದವಾಗಿಲ್ಲ. ಅಕ್ಬರ ಬಾದಶಹನು ಪಂಢರೀಕ ವಿಠಲನಿಗೆ "ಅಕಬರೀಯ ಕಾಲಿದಾಸ" ಎಂಬ ಬಿರುದನ್ನು ನೀಡಿ ಗೌರವಿಸಿದನೆಂದು ತಿಳಿದು ಬರುತ್ತದೆ.

ಪಂಢರೀಕ ವಿಠಲನು ರಚಿಸಿದ ಮೊದಲ ಗ್ರಂಥ 'ಷಡ್ರಾಗ ಚಂದ್ರೋದಯ' (ಸದ್ರಾಗ ಚಂದ್ರೋದಯ) ದಲ್ಲಿ ಸ್ವರ ಪ್ರಸ್ತಾರ, ಸ್ವರಮೇಲ, ಮತ್ತು ಗಮಕಾಲಿಪ್ತಿ ಎಂಬ ಮೂರು ಪ್ರಕರಣಗಳಿವೆ. ಸ್ವರ ಪ್ರಸ್ತಾರದಲ್ಲಿ ಇಪ್ಪತ್ತೆರಡು ಶ್ರುತಿಗಳು, ಪ್ರಕೃತಿ, ವಿಕೃತಿ, ಸ್ವರವ್ಯವಸ್ಥೆ ಇತ್ಯಾದಿ ಸಂಗೀತದ ಮೂಲಭೂತ ಅಂಶಗಳನ್ನು ಹೇಳಿದ್ದಾನೆ. ಸ್ವರಮೇಲ ಪ್ರಸ್ತಾರವೆಂಬ ಎರಡನೆಯ ಪ್ರಕರಣ ಬಹಳ ಮುಖ್ಯವಾದುದಾಗಿದೆ. ಪ್ರಕೃತಿ ವಿಕೃತಿ ಸ್ವರಸ್ಥಾನಗಳ ವ್ಯವಸ್ಥೆಯಿಂದ ಜನಿಸುವ ಮೇಳಗಳ ಸಂಖ್ಯೆಯನ್ನು ಇಲ್ಲಿ ಚರ್ಚಿಸಿದ್ದಾನೆ. ಮೂರನೆಯ ಪ್ರಕರಣ ಗಮಕ ಮತ್ತು ಆಲಿಪ್ತಿಗಳ ಪ್ರಭೇದಗಳನ್ನು ರಾಗಗಳ ವಾದನ ಕ್ರಮವನ್ನು ನಿರೂಪಿಸುತ್ತದೆ. ಈ ಗ್ರಂಥ ಸಂಗೀತ ಶಾಸ್ತ್ರ ಪರಂಪರೆಯಲ್ಲಿ ಬಹಳ ಮುಖ್ಯವಾದುದು. ಪಂಢರೀಕ ವಿಠಲನ ನಂತರ ಒಂದು ಶತಮಾನದ ನಂತರ ಬಂದ ವೆಂಕಟಮುಖಿ ಪ್ರತಿಪಾದಿಸಿದ ಎಪ್ಪತ್ತೆರಡು ಮೇಳಕರ್ತಗಳಿಗೆ ಮುನ್ಸೂಚನೆಯನ್ನು ನೀಡಿದ ಗ್ರಂಥ. ಇದರಲ್ಲಿ ಒಟ್ಟು 263 ಶ್ಲೋಕಗಳಿವೆ.[3]

'ರಾಗಮಾಲಾ' ಗ್ರಂಥದಲ್ಲಿ 212 ಶ್ಲೋಕಗಳಿವೆ. ರಾಗಗಳ ಉತ್ಪತ್ತಿ, ನಾದ, ಶ್ರುತಿ, ಸ್ವರ, ಮೂರ್ಛನೆ, ಗಮಕ, ಅಲಂಕಾರ, ವರ್ಣಾಲಂಕಾರ, ಆಲಿಪ್ತಿ ಭೇದಗಳು ರಾಗಗಳ ಪರಿವಾರ ರಾಗದ ಲಕ್ಷಣ ಮುಂತಾದ ಸಂಗೀತ ಶಾಸ್ತ್ರದ ವಿಷಯಗಳು ಈ ಗ್ರಂಥದಲ್ಲಿವೆ.

'ರಾಗಮಂಜರಿ' ಗ್ರಂಥದಲ್ಲಿ ಸ್ವರಾಧ್ಯಾಯ ಮತ್ತು ರಾಗಾಧ್ಯಾಯ ಮತ್ತು

ಎರಡು ಭಾಗಗಳಿವೆ. ಇದು ಅನುಷ್ಟುಪ್ ಛಂದಸ್ಸಿನಲ್ಲಿ ರಚಿತವಾಗಿದೆ. ಇದು ಚಿಕ್ಕಗ್ರಂಥ. ಸ್ವರಾಧ್ಯಾಯದಲ್ಲಿ ನಾದ, ಶ್ರುತಿ, ಸ್ವರಗ್ರಾಮ ಮೂರ್ಛನಾ ಗಮಕಗಳು ಇತ್ಯಾದಿ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ರಾಗಾಧ್ಯಾಯದಲ್ಲಿ ಒಟ್ಟು 20 ಮೇಳಗಳನ್ನು 66 ರಾಗಗಳನ್ನು ವರ್ಣಿಸಿದ್ದಾನೆ.

'ನರ್ತನ ನಿರ್ಣಯ' ಗ್ರಂಥದಲ್ಲಿ ನಾಲ್ಕು ಪ್ರಕರಣಗಳಿವೆ. ಈ ಗ್ರಂಥವು ಬಹುಸ್ವಾರಸ್ಯವೂ ಮುಖ್ಯವೂ ಆದ ಅನೇಕ ವಿಷಯಗಳಿಂದ ಮಹತ್ವಪಡೆದಿದೆ. ಪರ್ಶಿಯನ್ ಸಂಗೀತದಲ್ಲಿ ಸ್ವರಾಷ್ಟಕವನ್ನು ವಿಭಾಗಿಸುವ ಹದಿನೇಳು ಸ್ವರಾಂತರಗಳನ್ನು, ಹದಿನೆಂಟು ಶ್ರುತಿಗಳೆಂದು ಕರೆದು, ಮತ್ತು ಅಲ್ಲಿನ ಅನೇಕ ರಾಗಗಳನ್ನು ಭಾರತೀಯ ಸಂಗೀತಕ್ಕಳವಡಿಸಿ ವಿಶೇಷ ಕೌಶಲ್ಯವನ್ನು ತೋರಿಸಿದ್ದಾನೆ. ಈ ಗ್ರಂಥದ ಮೊದಲ ಪ್ರಕರಣದಲ್ಲಿ ನೃತ್ಯಕ್ಕೆ ಅನುಕೂಲಿಸುವ ತಾಳ ಮೃದಂಗಾದಿಗಳ ವರ್ಣನೆ ರಚನೆಗಳೂ, ಎರಡನೆಯದರಲ್ಲಿ ಇವುಗಳ ಧಾರಣ ಮತ್ತು ವಾದನ ವಿಧಿಗಳೂ ವಿವಿಧ ತಾಳಗಳವರ್ಣನೆ, ಮೂರನೆಯ ಪ್ರಕರಣದಲ್ಲಿ ಶ್ರುತಿ, ಸ್ವರ, ಗ್ರಾಮ, ಮೂರ್ಛನೆ ತಾನ ಪ್ರಸ್ತಾರ ಮಿತಿನಷ್ಟ ಉದ್ದಿಷ್ಟ ವರ್ಣಾಲಂಕಾರಗಳು ಆಲಿಪ್ತಿ ಪ್ರಬೇಧಗಳು ರಾಗಾಲಾಪನ ವಿಧಾನ, ವಾದನ ವಿಧಾನ, ಮೃದಂಗ ಲಕ್ಷಣ 66 ರಾಗಗಳಿಗೆ ಸ್ವರನಿರ್ದೇಶಿತ ಲಕ್ಷಣ, ಗೇಯ ರಚನಾ ರೀತಿಗಳು ಹಾಡಿನ ಗುಣದೋಷಗಳು ವಾಗ್ಗೇಯಕಾರನ ಲಕ್ಷಣಗಳು ಇತ್ಯಾದಿ ನಾಲ್ಕನೆಯ ನೃತ್ಯಾಧ್ಯಾಯದಲ್ಲಿ ನಾಟ್ಯ ನರ್ತನ ಅಭಿನಯ ಮೊದಲಾದವನ್ನು ನಿರೂಪಿಸಿದ್ದಾನೆ. ಪಂಢರೀಕ ವಿಠಲನು ರಚಿಸಿದನೆಂದು ಹೇಳಲಾಗುವ 'ದೂತೀಕರ್ಮ ಪ್ರಕಾಶ' ವಿಪ್ರಲಂಭ ಶೃಂಗಾರದಲ್ಲಿ ನಾಯಿಕಾ–ನಾಯಕರ ಸಮಾಗಮಕ್ಕೆ ಅನುಕೂಲಿಸುವ ದೂತಿಯರ ವಿಧಗಳು, ಕರ್ತವ್ಯ ಇತ್ಯಾದಿಗಳನ್ನು ವಿವರಿಸುವ ಒಂದು ಪ್ರಕರಣ ಗ್ರಂಥ. 'ಶೀಘ್ರ ಬೋಧಿನಿನಾಮಮಾಲಾ' ಎಂಬುದು ಕೋಶಗ್ರಂಥ. ಇವೆರಡು ಉಪಲಬ್ಧವಿಲ್ಲ.

ಪಂಢರೀಕ ವಿಠಲನು ರಚಿಸಿದ ಈ ನಾಲ್ಕು ಸಂಸ್ಕೃತ ಭಾಷೆಯ ಸಂಗೀತ ಗ್ರಂಥಗಳು ಎರಡೂ ಸಂಗೀತ ಪದ್ಧತಿಗಳಲ್ಲಿ ಮತ್ತು ನರ್ತನ ಕ್ಷೇತ್ರದಲ್ಲಿ ಪ್ರಮಾಣ ಗ್ರಂಥಗಳಾಗಿವೆ. ಇವು ಪ್ರಾಮಾಣಿಕವಾದ ಅಧಿಕಾರ ಮುಂತಾದ ಮತ್ತು ಸರ್ವಕಾಲೀನ ಮೌಲ್ಯವುಳ್ಳ ಗ್ರಂಥಗಳೆಂದು ಶಾಸ್ತ್ರಜ್ಞರಿಂದ ಪರಿಗಣಿಸಲ್ಪಟ್ಟಿವೆ.[4]

ಪಂಢರೀಕವಿಠಲನು ರಚಿಸಿದ ಈ ನಾಲ್ಕು ಗ್ರಂಥಗಳನ್ನು ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ವಿಮರ್ಶಾತ್ಮಕ ಸಂಪಾದನೆ, ವಿಮರ್ಶಾತ್ಮಕ ಪೀಠಿಕೆ, ಅನುವಾದ, ವ್ಯಾಖ್ಯಾನ ಮತ್ತು ಅನುಬಂಧದೊಡನೆ ಸಂಗೀತ ಶಾಸ್ತ್ರಜ್ಞ ಪುರುಷ

ಸರಸ್ವತಿ ಎನಿಸಿರುವ ಡಾ. ರಾ. ಸತ್ಯನಾರಾಯಣ ಅವರು ಒಂದೇ ಗ್ರಂಥದಲ್ಲಿ ಬರೆದು ಕೊಟ್ಟಿದ್ದಾರೆ. ಅದನ್ನು 'ಪಂಢರೀಕ ಮಾಲಾ' ಎಂಬ ಹೆಸರಿನಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸಂಯುಕ್ತವಾಗಿ ಪ್ರಕಟಿಸಿ, ಕನ್ನಡಗರಿಗೆ ಮಹದುಪಕಾರ ಮಾಡಿವೆ. ಇಂಥಹ ಮಹಾನ್ ಕೃತಿಯನ್ನು ಕನ್ನಡಕ್ಕೆ ತಂದು ಸಂಗೀತ ಹಾಗೂ ಕನ್ನಡ ಸಾಹಿತ್ಯ ಲೋಕಕ್ಕೆ ಮರೆಯಲಾಗದ ಉಪಕಾರ ಮಾಡಿರುವ ಡಾ.ರಾ. ಸತ್ಯನಾರಾಯಣ ಅವರಿಗೆ ಸಮಸ್ತ ಕನ್ನಡಿಗರು ಹಾಗೂ ಸಂಗೀತ ಕ್ಷೇತ್ರ ಅವರಿಗೆ ಋಣಿಯಾಗಿದೆ.

**ಅಡಿಟಿಪ್ಪಣಿಗಳು:**

1. ಸತ್ಯನಾರಾಯಣ ರಾ. (1986). ಪಂಢರೀಕ ಮಾಲಾ. ಸಂಗೀತ ನೃತ್ಯ ಅಕಾಡೆಮಿ. ಬೆಂಗಳೂರು. ಪು.ಸಂ. 1
2. ಲಕ್ಷ್ಮೀನಾರಾಯಣ ಗರ್ಗ. (1993). ಹಮಾರೆ ಸಂಗೀತ ರತ್ನ. ಸಂಗೀತ ಕಾರ್ಯಲಾಯ. ಹಾಥರಸ. ಪು.ಸಂ. 52
3. ತಿಪ್ಪೇರುದ್ರಸ್ವಾಮಿ ಎಚ್. (1991). ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು.ಸಂ. 668
4. ಸತ್ಯನಾರಾಯಣ ರಾ. (1986). ಪಂಢರೀಕ ಮಾಲಾ. ಸಂಗೀತ ನೃತ್ಯ ಅಕಾಡೆಮಿ. ಬೆಂಗಳೂರು. ಪು.ಸಂ. 67

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.